ದಿಃ **13-12-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. **H.N** ವಕೀಲರವರಿಂದಃ

**01.** ಇವತ್ತು ನ್ಯಾಯಾಲಯಕ್ಕೆ ನನ್ನನ್ನು ವಾದಿಯು ಕರೆದುಕೊಂಡು ಬಂದಿರುತ್ತಾನೆ. ನನ್ನ ಪ್ರಮಾಣ ಪತ್ರವನ್ನು ವಾದಿಯು ಹೇಳಿ ಬರೆಸಿರುತ್ತಾನೆ. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ನೆನಪು ಇರುವುದಿಲ್ಲ. ನನ್ನ ಪ್ರಮಾಣ ಪತ್ರವನ್ನು ಬರೆಸುವಾಗ ನಾನು ಅಲ್ಲಿ ಇರಲಿಲ್ಲ. ನಾನು ಮತ್ತು ವಾದಿಯು ಸ್ನೇಹಿತರು. ನನ್ನ ಹೊಲದ ಸರ್ವೇ ನಂಬರ **108** ಅದು **2** ಎಕರೆ ಇರುತ್ತದೆ. ವಾದಿ ಮತ್ತು ಪ್ರತಿವಾದಿಯ ವ್ಯವಹಾರ ಆಗುವಾಗ ನಾನು ಅಲ್ಲಿ ಇರಲಿಲ್ಲ ಸಾಕ್ಷಿಯು ಮುಂದುವರೆದು ವಾದಿಯು ಪ್ರತಿವಾದಿಗೆ ಸ್ವಲ್ಪ ದುಡ್ಡು ಕೊಟ್ಟಿರುತ್ತಾನೆ ಇನ್ನೊಂದು ಸ್ವಲ್ಪ ಕೊಡುದು ಇದೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ನನಗೆ ವಾದಿಯು ಹೇಳಿರುತ್ತಾನೆ. ಯಾವಾಗ ವ್ಯವಹಾರ ಆಗಿರುತ್ತದೆ ಎಂದು ನನಗೆ ದಿನಾಂಕ ಗೊತ್ತಿರುವುದಿಲ್ಲ ಸುಮಾರು ಹತ್ತು ವರ್ಷ ಆಗಿರಬಹುದು. ನನ್ನ ಪ್ರಮಾಣ ಪತ್ರದಲ್ಲಿ "ವ್ಯವಹಾರ ನಡೆಯುವ ಸಮಯದಲ್ಲಿ ನಾನು, ತಿಪ್ಪಣ್ಣ ಭೂವಿ ಹಾಗೂ ಯಂಕಾನಾಯ್ಕ ಸಹ ಹಾಜರಿದ್ದು" ಎಂದು ಇರುವುದು ಸುಳ್ಳಾ? ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆ ದಿನ ಅಲ್ಲಿ ಇರಲಿಲ್ಲ, ನನ್ನನ್ನು ಕರೆದಿದ್ದರು ಆದರೆ ಆ ದಿನ ನನಗೆ ಕೆಲಸವಿದ್ದರಿಂದ ನಾನು ಹೋಗಿರುವುದಿಲ್ಲ. ವಾದಿಯು **2** ಲಕ್ಷದ ಚಿಲ್ಲರೆಗೆ ವ್ಯವಹಾರವಾಗಿದ್ದು, **2** ಲಕ್ಷ ಕೊಟ್ಟಿರುತ್ತೇನೆ ಎಂದು ನನಗೆ ಹೇಳಿರುತ್ತಾನೆ. ಈ ವಿಷಯವನ್ನು ವ್ಯವಹಾರ ಆಗಿ ಮರುದಿನ ವಾದಿಯು ಹೇಳಿರುತ್ತಾನೆ. ವ್ಯವಹಾರವಾದ ಮರುದಿನ ವಾದಿಯು ನನಗೆ ವ್ಯವಹಾರದ ಬಗ್ಗೆ ಹೇಳಿರುವ ವಿಷಯ ಸುಳ್ಳು, ಯಾವುದೇ ವ್ಯವಹಾರ ಆಗಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**02.** ದಾವಾ ಸ್ವತ್ತಿನ ಸರ್ವೇ ನಂಬರ **106** ಇರುತ್ತದೆ. ಪ್ರತಿವಾದಿಗೆ ಅವರ ತಂದೆಯಿಂದ ವಿಲ್ಲ ಮುಖಾಂತರ ದಾವಾ ಆಸ್ತೀಯು ಬಂದಿರುತ್ತದೆ. ಪ್ರತಿವಾದಿಯ ತಂದೆಯ ಹೆಸರು ತಿಂದಪ್ಪ, ಅವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾನೆ. ದಾವಾ ಆಸ್ತೀಯ ಮೇಲೆ ತಿಂದಪ್ಪನ ಎಲ್ಲಾ ಮಕ್ಕಳಿಗೂ ಹಕ್ಕು

**ಇರುತ್ತದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ಆಗದಿದ್ದರೂ, ವಾದಿಯು ನನ್ನ ಸ್ನೇಹಿತ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿನ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.**

**<u>ಮರುವಿಚಾರಣೆ ಇರುವುದಿಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"
**Sd/-**
(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.

ದಿಃ **13-12-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. **H.N** ವಕೀಲರವರಿಂದಃ

**01.** ನನ್ನ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವಾದಿಯು ನೀಡಿರುತ್ತಾರೆ. ವಾದಿಯು ಪ್ರಮಾಣ ಪತ್ರಕ್ಕೆ ಮಾಹಿತಿ ನೀಡುವಾಗ ನಾನು ಅಲ್ಲಿ ಇರಲಿಲ್ಲ. ನಾನು ಮತ್ತು ವಾದಿಯು ಸ್ನೇಹಿತರು, ಸಾಕ್ಷಿಯು ಮುಂದುವರೆದು ನಾವು ಅವರು ಹೊಲದ ಅಕ್ಕಪಕ್ಕದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಜಮೀನು ಹಗರನೂರು ಗ್ರಾಮದಲ್ಲಿ ಇರುತ್ತದೆ. ಅದರ ಸರ್ವೇ ನಂಬರ **107** ಅದು **3** ಎಕರೆ ಇರುತ್ತದೆ. ದಾವಾ ಆಸ್ತೀಯ ಸರ್ವೇ ನಂಬರ **106** ಇರಬಹುದು. ದಾವಾ ಆಸ್ತೀಯು ಅಲಬೂರು ತಿಂದಪ್ಪನ ಹೆಸರಿನಲ್ಲಿ ಇರುತ್ತದೆ. ಅಲಬೂರು ತಿಂದಪ್ಪನಿಗೆ **3** ಜನ ಮಕ್ಕಳು ಎಂದರೆ ಸರಿ. ತಿಂದಪ್ಪನ ಮಕ್ಕಳಿಗೆ ಅವನ ಆಸ್ತೀಯಲ್ಲಿ ಎಲ್ಲರಿಗೂ ಹಕ್ಕು ಇರುತ್ತದೆ ಎಂದರೆ ಸರಿ. ಪ್ರತಿವಾದಿ ಯಾರು ಎಂದು ನನಗೆ ಹೇಳಲು ಬರುವುದಿಲ್ಲ.

**02.** ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಹಾಗೆ "ಪ್ರತಿವಾದಿಗೆ ಈ ಹಿಂದೆ ಅವರ ತಂದೆಯವರು ಬರೆಸಿಟ್ಟ ನೊಂದಾಯಿತ ವಿಲ್ಲ ನಾಮಾ ದಾಸ್ತಾವೇಜು ಮೂಲಕ ಪ್ರತಿವಾದಿಗೆ ಬಂದಿದ್ದು" ಎಂದರೆ ಏನು ಎಂದು ನನಗೆ ಹೇಳಲು ಗೊತ್ತಾಗುವುದಿಲ್ಲ. ಅದೇ ರೀತಿಯಾಗಿ ಈ ಪ್ರಕರಣದಲ್ಲಿ ವಾದಿ ಎಂದರೆ ಯಾರು ಎಂದು ಹೇಳಲು ಆಗುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಏನು ಮತ್ತು ಯಾವಾಗ ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ತಾವರ್ಯಾಯ್ಕನು ತೆಗೆದುಕೊಂಡಿರುತ್ತಾನೆ. ಏನು ತೆಗೆದುಕೊಂಡಿರುತ್ತಾನೆ ಎಂದು ನ್ಯಾಯಾಲಯವು ಕೇಳಿದಾಗ ಹೊಲ ತೆಗೆದುಕೊಂಡಿರುತ್ತಾನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಹೊಲ ತೆಗೆದುಕೊಂಡಿರುವ ವಿಷಯವನ್ನು ವಾದಿಯು ನನಗೆ ಹೇಳಿರುತ್ತಾನೆ. ಸುಮಾರು **4-5** ವರ್ಷಗಳ ಹಿಂದೆ ವಾದಿಯು ನನಗೆ ದಾವಾ ಆಸ್ತೀಯನ್ನು ಖರೀದಿಸಿರುವ ಬಗ್ಗೆ ಹೇಳಿರುತ್ತಾನೆ. ಎಷ್ಟು ಹಣಕ್ಕೆ ವಾದಿಯು ದಾವಾ ಆಸ್ತೀಯನ್ನು ಖರೀದಿಸಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಖರೀದಿಸಿರುತ್ತಾನೆ. ನನ್ನ ಪ್ರಮಾಣ ಪತ್ರದಲ್ಲಿ "ವ್ಯವಹಾರ ನಡೆಯುವ ಸಮಯದಲ್ಲಿ ನಾನು, ಕೊಟ್ರೇಶ, ಯಂಕಾನಾಯ್ಕ ಸಹ

ಹಾಜರಿದ್ದು" ಎಂದು ಬರೆದಿದೆ ಎಂದರೆ ಸಾಕ್ಷಿಯು ಪ್ರಮಾಣ ಪತ್ರ ಬರೆಯುವ ಸಂಧರ್ಬದಲ್ಲಿ ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿಯು ಆತ್ಮಿಯ ಸ್ನೇಹಿತರು ಇರುವುದರಿಂದ ವಾದಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"
**Sd/-**
(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.

ದಿಃ **13-12-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. H.N ವಕೀಲರವರಿಂದಃ**

**01.** ವಾದಿಯು ನನಗೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ. ವಾದಿಯ ಮಗ ಮತ್ತು ನಾನು ಸ್ನೇಹಿತರು. ನನ್ನ ಪ್ರಮಾಣ ಪತ್ರದ ಮಾಹಿತಿಯನ್ನು ವಾದಿಯು ನೀಡಿರುತ್ತಾನೆ. ಪ್ರಮಾಣ ಪತ್ರಕ್ಕೆ ಮಾಹಿತಿ ನೀಡುವಾಗ ನಾನು ಅಲ್ಲಿ ಹಾಜರು ಇದ್ದೇನು. ಯಾವ ದಿನಾಂಕದಂದು ಪ್ರಮಾಣ ಪತ್ರಕ್ಕೆ ವಾದಿಯು ಮಾಹಿತಿ ನೀಡಿರುತ್ತಾನೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ, ಸುಮಾರು **3** ವರ್ಷದ ಹಿಂದೆ ಮಾಹಿತಿಯನ್ನು ನೀಡಿ ಪ್ರಮಾಣ ಪತ್ರವನ್ನು ಬರೆಸಿರಬಹುದು.

**02.** ವಾದಿ ಮತ್ತು ಪ್ರತಿವಾದಿಯರ ಮಧ್ಯೆ **2018** ರಲ್ಲಿ ವ್ಯವಹಾರ ಆಗಿದ್ದು, ವಾದಿಯು ಪ್ರತಿವಾದಿಗೆ **2** ಲಕ್ಷ ರೂಪಯಿಗಳನ್ನು ನೀಡಿರುತ್ತಾನೆ, ದಿನಾಂಕವನ್ನು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಆ ದಿನ ಕ್ರಯ ಕರಾರು ಪತ್ರವನ್ನು ಬರೆದಿರಬಹುದು. **2018** ರಲ್ಲಿ ವ್ಯವಹಾರ ಆಗಿರುವ ಬಗ್ಗೆ ನನಗೆ ವಾದಿಯ ಮಗ ನಾಗರಾಜ ಹೇಳಿರುತ್ತಾರೆ. ಈ ವ್ಯವಹಾರದ ಹಣ ಕೊಡುವಾಗ ಮತ್ತು ತೆಗೆದುಕೊಳ್ಳುವಾಗ ನಾನು ಉಪಸ್ಥಿತ ಇರುವುದಿಲ್ಲ. **2018** ರಲ್ಲಿ ಆದ ಕ್ರಯ ಕರಾರು ಪತ್ರಕ್ಕೆ ಯಾರ್ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಕ್ರಯ ಕರಾರು ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ. ನಾನು ತಾಲ್ಲೂಕು ಕಛೇರಿಯಲ್ಲಿ ಕ್ರಯ ಕರಾರು ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ. ಅಲ್ಲಿ ಯಾರ್ಯಾರು ಇದ್ದರು ಎಂದು ಹೇಳಲು ಬರುವುದಿಲ್ಲ, ನಾನು ಸಹಿಯನ್ನು ಹಾಕಿ ಅಲ್ಲಿಂದ ಹೋಗಿರುತ್ತೇನೆ. ನನ್ನನ್ನು ವಾದಿಯು ಸಹಿ ಹಾಕಲು **2018** ರಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಆ ಸಂದರ್ಬದಲ್ಲಿ ವಾದಿ ಮತ್ತು ಪ್ರತಿವಾದಿ ಎಷ್ಟು ಹಣ ಕೊಟ್ಟರು ಮತ್ತು ತೆಗೆದುಕೊಂಡರು ಎಂದು ನಾನು ನೋಡಿರುವುದಿಲ್ಲ. ನನಗೆ ಯಾವುದೇ ವಿಷಯ ಗೊತ್ತಿದ್ದರೂ ಸಹ ನನ್ನ ಸ್ನೇಹಿತನಾದ ನಾಗರಾಜ ಅವರ ತಂದೆ ತಾರ್ವಯಾನಾಯ್ಕ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ.)

ದಿವಾಣಿ ನ್ಯಾಯಾಧೀಶರು,

ಹಡಗಲಿ.